ಶ್ರೀ ಕೆ.ಎಸ್. ಈಶ್ವರಪ್ಪ ; Project Report ಇಡುತ್ತೇವೆ. ಚರ್ಚೆ ಮಾಡುತ್ತೇವೆಂದು ಹೇಳಿದೆವಲ್ಲ. ಇನ್ನು ನಾನು ಈಗ ಯಾವ ರೀತಿಯಲ್ಲಿ ಉತ್ತರ ಕೊಡಲಿ?

ಅಧ್ಯಕ್ಷರು : ಆಯಿತು. ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ : ಮಂತ್ರಿಗಳೇ ಹೀಗೆ ಹೇಳಿಬಿಟ್ಟರೆ. detailed project report ಬೇಕಾಗಿಲ್ಲ. ಅಗ್ರಿಮೆಂಟ್ ಮಾಡಿಕೊಳ್ಳುತ್ತೇವೆಂದರೆ. ಏನಿದು?

ಶ್ರೀ ಕೆ.ಎಸ್. ಈಶ್ವರಪ್ಪ ; ಹೊರಗಡೆ ಸ್ಟೇಟ್‌ಮೆಂಟ್ ಮಾಡಿದರೆ ಆಯಿತೇ. ನಾವು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಯಮಾಡಿ ಈ ಮನೆಯ ಯಾವುದೇ ಹಿರಿಯ ಸದಸ್ಯರು ತಪ್ಪು ಗ್ರಹಿಕೆ ಮಾಡಿಕೊಳ್ಳುವ ಅಗತ್ಯವಿಲ್ಲ. ಈ ಮನೆಯಲ್ಲಿ ಚರ್ಚೆಯಾಗಬೇಕು. ನಿಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೇ ನಾವು ಮುಂದೆ ಹೋಗಬೇಕಾಗಿದೆ. ಆ ಹಿನ್ನೆಲೆಯಲ್ಲಿ ಪ್ರತಿ ಪಕ್ಷದ ಎಲ್ಲಾ ನಾಯಕರುಗಳ ಒಂದು ಸಭೆ ಕರೆದಿದ್ದೆ. ಅವತ್ತು ಚರ್ಚೆಯಾಗಲಿಲ್ಲ. ಅವರು ಇಲ್ಲಿಯೇ ಜಿಂದಾಲ್‌ನಲ್ಲಿ ಇದ್ದುದರಿಂದ ನಮಗೆ ತುರ್ತಾಗಿ 200. 300 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಬೇಕಾಗಿದ್ದುದರಿಂದ ನಾವು ರಿಕ್ವೆಸ್ಟ್ ಮಾಡಿಕೊಂಡು ಆ ದಿಕ್ಕಿನಲ್ಲಿ ನಮ್ಮ ಅಧಿಕಾರಿಗಳು ಪ್ರಯತ್ನಿಸಿ ಅಲ್ಲಿಗೆ ಹೋಗಿ ಬಂದಿದ್ದಾರೆ. ಈ ಸಂದರ್ಭದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅಲ್ಲಿ ಕಲ್ಲಿದ್ದಲು ಸಿಗುತ್ತಿರುವುದರಿಂದ ಅಲ್ಲಿನ ಸರ್ಕಾರದ 1.500 ಎಕರೆಯಷ್ಟು ಭೂಮಿಯಲ್ಲಿ 1.000 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಮಾಡುವುದಕ್ಕೆ ಬೇಕಾದಷ್ಟು ಸ್ಥಳವೂ ಸಿಗುತ್ತಿದೆ ಎಂದು ಪ್ರಯತ್ನ ಮಾಡುತ್ತಿದ್ದೇವೆ. ಈ ದಿಕ್ಕಿನಲ್ಲಿ ನಾವು ನಾಳೆ ಮಾತುಕತೆಯಾಡುವುದಕ್ಕಿಂತ ಮುಂಚೆ ಸದನದ ಗಮನಕ್ಕೆ ತರುವುದು ನಮ್ಮ ಕರ್ತವ್ಯ Ultimate ಆಗಿ final decision ತೆಗೆದುಕೊಳ್ಳುವ ಸಮಯದಲ್ಲಿ ಮಾಡೋಣ.

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) ; ಸನ್ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು 31ನೇ ಮಾರ್ಚಿ 2007ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಧನ ವಿನಿಯೋಗ ಲೆಕ್ಕ ಪತ್ರಗಳು ಮತ್ತು ಆರ್ಥಿಕ ಲೆಕ್ಕಪತ್ರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು 31ನೇ ಮಾರ್ಚಿ 2007ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕ ಪರಿಶೋಧನಾ (ರಾಜಸ್ವ ಸ್ವೀಕೃತಿ) ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು 31ನೇ ಮಾರ್ಚಿ 2007ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕ ಪರಿಶೋಧನಾ (ಸಿವಿಲ್) ವರದಿಯನ್ನು ಸಬೆಯ ಮುಂದಿಡುತ್ತಿದ್ದೇನೆ.

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು 31ನೇ ಮಾರ್ಚಿ 2007ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕ ಪರಿಶೋಧನಾ (ವಾಣಿಜ್ಯ) ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು ; ಸಭೆಯ ಮುಂದಿಡಲಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ) ಅವರು ; ಮಾನ್ಯ ಅಧ್ಯಕ್ಷರೆ, 1997 ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 48 ಮತ್ತು 49ನೇ ಪ್ರಕರಣದ ಮೇರೆಗೆ.

1. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ.

1964ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ ಅನುಚ್ಛೇದ 17(3)ರ ಪ್ರಕರಣದ ಮೇರೆಗೆ :

1. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2007–08ನೇ ಸಾಲಿನ ವಾರ್ಷಿಕ ಪರಿಷ್ಕೃತ ಆಯವ್ಯಯ ಪಟ್ಟಿ ಮತ್ತು 2008–09ನೇ ಸಾಲಿನ ಆಯವ್ಯಯ ಪಟ್ಟಿ.

2. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2006–07ನೇ ಸಾಲಿನ ವಾರ್ಷಿಕ ಲೆಕ್ಕ ಮತ್ತು ಲೆಕ್ಕಪರೀಕ್ಷಕರ ವರದಿ

1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 47ರ ಮೇರೆಗೆ :

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ಪ್ರಮಾಣೀಕೃತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿ.

2005ರ ಮಾಹಿತಿ ಹಕ್ಕು ಅಧಿನಿಯಮ (ಕೇಂದ್ರ) ಕಲಂ 25 (4)ರ ಮೇರೆಗೆ :

1. ಕರ್ನಾಟಕ ಮಾಹಿತಿ ಆಯೋಗದ 2005–06ನೇ ಸಾಲಿನ 1ನೆ ವಾರ್ಷಿಕ ವರದಿ

1956ರ ಕಂಪನಿ ಅಧಿನಿಯಮದ 619(ಎ)(2) ಪ್ರಕರಣದ ಮೇರೆಗೆ :

1. ಕರ್ನಾಟಕ ಪಲ್ಪ್‌ವುಡ್ ನಿಯಮಿತದ 2004–05ನೇ ಸಾಲಿನ 20ನೇ. 2005–06ನೇ ಸಾಲಿನ 21ನೇ ಮತ್ತು 2006–07ನೇ ಸಾಲಿನ 22ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಎಸ್.ಎನ್.ಕೃಷ್ಣಯ್ಯ ಶೆಟ್ಟಿ (ಮುಜರಾಯಿ ಮತ್ತು ವಸತಿ ಸಚಿವರು) ಅವರು :– ಮಾನ್ಯ ಅಧ್ಯಕ್ಷರೆ.

1962ರ ಕರ್ನಾಟಕ ವಸತಿ ಮಂಡಳಿ ಅಧಿನಿಯಮದ ಕಲಂ 55(3)ರ ಮೇರೆಗೆ ;

1. ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ 2006–07ನೇ ಸಾಲಿನ 7ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಅಸ್ನೋಟಿಕರ್ ಆನಂದ್ ವಸಂತ್ (ಮೀನುಗಾರಿಕೆ ಸಚಿವರು) ಅವರು :– ಮಾನ್ಯ ಅಧ್ಯಕ್ಷರೆ.

1956ರ ಕಂಪನಿ ಅಧಿನಿಯಮದ 619(ಎ)(2) ಪ್ರಕರಣದ ಮೇರೆಗೆ :

1. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2006–07ನೇ ಸಾಲಿನ 37ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) ಅವರು :– ಮಾನ್ಯ ಅಧ್ಯಕ್ಷರೆ.

1956ರ ಕಂಪನಿ ಅಧಿನಿಯಮ 619(ಎ)(2) ಪ್ರಕರಣದ ಮೇರೆಗೆ.

1. ಕರ್ನಾಟಕ ರಾಜ್ಯ ಆಗ್ರೋಕಾರ್ನ್ ಪ್ರಾಡಕ್ಟ್ ನಿಯಮಿತದ 2006–07ನೇ ಸಾಲಿನ 34ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ. ಮತ್ತು

1963ರ ಕೃಷಿ ವಿಶ್ವವಿದ್ಯಾನಿಲಯ ಅಧಿನಿಯಮದ ಕಲಂ 38(3)ರ ಪ್ರಕರಣದ ಮೇರೆಗೆ :

1. ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಅನುಸರಣಾ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) ಅವರು ;–

1950ರ ರಸ್ತೆ ಸಾರಿಗೆ ಸಂಸ್ಥೆ ಅಧಿನಿಯಮದ (ಕೇಂದ್ರ) ಕಲಂ 35(2)ರ ಹಾಗೂ 33(4)ರ ಪ್ರಕರಣದ ಮೇರೆಗೆ :

1. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ. ಗುಲ್ಬರ್ಗಾದ 2006–07ನೇ ಸಾಲಿನ 7ನೇ ವಾರ್ಷಿಕ ಆಡಳಿತ ವರದಿ.

2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ. ಮತ್ತು

3. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ 2006–07ನೇ ಸಾಲಿನ 46ನೇ ವಾರ್ಷಿಕ ಆಡಳಿತ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) ಅವರು ;– ಮಾನ್ಯ ಅಧ್ಯಕ್ಷರೆ.

1956ರ ಕಂಪನಿ ಅಧಿನಿಯಮ 619(ಎ)(3) ಪ್ರಕರಣದ ಮೇರೆಗೆ :

1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ. ಮತ್ತು

2. ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2006–07ನೇ ಸಾಲಿನ 5ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು)

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) ಪರವಾಗಿ :– ಮಾನ್ಯ ಅಧ್ಯಕ್ಷರೆ.

1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 24 ಹಾಗೂ 25ರನ್ವಯ ;

1. ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ. ಶಿವಮೊಗ್ಗದ 2007–08ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು. ಮತ್ತು

2. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ. ಕೃಷ್ಣ ಮೇಲ್ದಂಡೆ ಯೋಜನೆ. ಗುಲ್ಬರ್ಗಾ ಇದರ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು)

ಕುಮಾರಿ ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಅವರ ಪರವಾಗಿ :– ಮಾನ್ಯ ಅಧ್ಯಕ್ಷರೆ.

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262 (3)ನೇ ಮತ್ತು 300 (5)ನೇ ಪ್ರಕರಣದ ಮೇರೆಗೆ :

1. ಬೀದರ್ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ಗದಗ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಆಡಳಿತ ವರದಿ.

4. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.

5. ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ. ಮತ್ತು

6. ಕೋಲಾರ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಮುರುಗೇಶ್ ನಿರಾಣಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಅವರು :– ಮಾನ್ಯ ಅಧ್ಯಕ್ಷರೆ.

1956ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಕಾಯ್ದೆಯ ಕಲಂ 26ರ ಮೇರೆಗೆ :

1. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ. ಬೆಂಗಳೂರು ಇದರ 2006–07ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು :– ಸಭೆಯ ಮುಂದೆ ಮಂಡಿಸಲಾಯಿತು.

5. ಗಮನ ಸೆಳೆಯುವ ಸೂಚನೆ.

(ಅ) ವಿಷಯ ; ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾರಕ ರೋಗಗಳಿಂದ ಉಂಟಾಗಿರುವ ಸಾವುಗಳಿಗೆ ಪರಿಹಾರ ಮತ್ತು ರೋಗ ಹತೋಟಿಯ ಬಗ್ಗೆ.

ಶ್ರೀ ಕೆ.ವಸಂತ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾರಕ ರೋಗಗಳಿಂದ ಉಂಟಾಗಿರುವ ಸಾವುಗಳಿಗೆ ಪರಿಹಾರ ಮತ್ತು ರೋಗ ಹತೋಟಿಯ ಬಗ್ಗೆ ನಾನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) ; (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) ;– ಮಾನ್ಯ ಅಧ್ಯಕ್ಷರೆ....

ಶ್ರೀ ಕೆ.ವಸಂತ ಬಂಗೇರ : ಮಾನ್ಯ ಅಧ್ಯಕ್ಷರೆ. ನಮಗೆ ಉತ್ತರವೇ ಬಂದಿಲ್ಲ.

ಅಧ್ಯಕ್ಷರು : ಮಾನ್ಯ ಅಶೋಕ್‌ರವರೆ. ಉತ್ತರದ ಪ್ರತಿಯನ್ನು ಒದಗಿಸಿಕೊಡಿ. ಅದರ ಪ್ರತಿ ಮಾನ್ಯ ಸದಸ್ಯರುಗಳಿಗೆ ತಲುಪಿಲ್ಲ. ಉತ್ತರದ ಪ್ರತಿಗಳನ್ನು ಸದಸ್ಯರುಗಳಿಗೆ ಸರಬರಾಜು ಮಾಡಿಲ್ಲ.

ಶ್ರೀ ಕೆ.ವಸಂತ ಬಂಗೇರ : ಅಧ್ಯಕ್ಷರೆ. ಬಡವರ ರೋಗದ ಬಗ್ಗೆ ಈ ಸರ್ಕಾರ ಯಾವ ರೀತಿ ಗಂಭೀರತೆ ಹೊಂದಿದೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ.